

ಸಿರಿ ರವಿಕುಮಾರ್

2023 ಕನ್ನಡನಾಡಿಗೆ ಕರ್ನಾಟಕವೆಂದು ನಾಮಕರಣವಾದ ಚಾರಿತ್ರಿಕ ಘಟನೆಗೆ 50 ವರ್ಷಗಳು ತುಂಬಿದ ವರ್ಷವೂ ಹೌದು. ಈ ಸಂಖ್ಯಾವಿಶೇಷಣವನ್ನೇ ನೆಪವಾಗಿಸಿಕೊಂಡು, ಐವತ್ತು ವರ್ಷಗಳ ಹಿಂದಿನ 1973ರ ಕನ್ನಡ ಚಿತ್ರೋದ್ಯಮದ ಸ್ಥಿತಿಗತಿ ಗಮನಿಸಬಹುದು.

ಕನ್ನಡ ಚಿತ್ರರಂಗದ ಪಾಲಿಗೆ ಎಪ್ಪತ್ತರ ದಶಕ ಸುವರ್ಣಯುಗವಾದರೆ, ಆ ಚಿನ್ನದಯುಗದಲ್ಲಿನ ರತ್ನಖಚಿತ ಅಧ್ಯಾಯಗಳಲ್ಲೊಂದು 1973. ಮುಖ್ಯವಾಹಿನಿ ಹಾಗೂ ಕಲಾತ್ಮಕ – ಎರಡೂ ಪ್ರಕಾರಗಳಲ್ಲಿ ಉತ್ತಮ ಚಿತ್ರಗಳು ರೂಪುಗೊಂಡು, ಕನ್ನಡ ಚಿತ್ರರಂಗ ದೇಶದ ಗಮನಸೆಳೆದ ವರ್ಷವದು.

‘ಕರ್ನಾಟಕ’ ಎನ್ನುವ ನಾಮಕರಣದ ನಂತರ ಮೊದಲು ತೆರೆಕಂಡ ಸಿನಿಮಾ ಪುಟ್ಟಣ್ಣ ಕಣಗಾಲರ ನಿರ್ದೇಶನದ ‘ಎಡಕಲ್ಲು ಗುಡ್ಡದ ಮೇಲೆ.’ ಪುಟ್ಟಣ್ಣನವರ ಶೈಲಿಯ ಅತ್ಯುತ್ತಮ ಉದಾಹರಣೆಯಂತಿರುವ ‘ಎಡಕಲ್ಲು ಗುಡ್ಡದ ಮೇಲೆ’ ಸಿನಿಮಾದ ತಾತ್ವಿಕತೆಯ ಬಗ್ಗೆ ಈಗ ತಕರಾರುಗಳನ್ನು ಹೇಳಬಹುದಾದರೂ, ಆ ಸಿನಿಮಾದ ಯಶಸ್ಸು ಹಾಗೂ ಅದರ ಪ್ರೇರಣೆಗಳನ್ನು ಕಡೆಗಣಿಸುವುದು ಸಾಧ್ಯವಿಲ್ಲ. ಎನ್. ಲಕ್ಷ್ಮೀನಾರಾಯಣ್‌ರ ‘ಅಬಚೂರಿನ ಪೋಸ್ಟ್ ಆಫೀಸ್’ ಹಾಗೂ ಪಿ.ವಿ. ನಂಜರಾಜೇ ಅರಸ್‌ರ ‘ಸಂಕಲ್ಪ’ ತೆರೆಕಂಡಿದ್ದು 1973ರಲ್ಲಿಯೇ. ಅನಂತನಾಗ್ ಅವರನ್ನು ನಾಯಕನಟನಾಗಿ ಪರಿಚಯಿಸಿದ್ದು ‘ಸಂಕಲ್ಪ’ ಸಿನಿಮಾದ ಹಿರಿಮೆಗಳಲ್ಲೊಂದು. (2023 ಅನಂತನಾಗ್ ವೃತ್ತಿಬದುಕಿಗೆ 50 ವರ್ಷ ತುಂಬಿದ ವರ್ಷವೂ ಹೌದು.)

ರಾಜ್‌ಕುಮಾರ್ ನಟನೆಯ 150ನೇ ಸಿನಿಮಾ, ವಿಜಯ್ ನಿರ್ದೇಶನದ ‘ಗಂಧದಗುಡಿ’ ತೆರೆಕಂಡಿದ್ದು 1973ರಲ್ಲಿ. ಕಾಡುಗಳ್ಳರನ್ನು ವಿಜೃಂಭಿಸುವ ಸಿನಿಮಾಗಳು ಯಶಸ್ಸು ಹಾಗೂ ಪುರಸ್ಕಾರ ಎರಡಕ್ಕೂ ಪಾತ್ರವಾಗುತ್ತಿರುವ ಸಂದರ್ಭದಲ್ಲಿ, ‘ಗಂಧದಗುಡಿ’ ಸಿನಿಮಾ ರಂಜನೆ ಹಾಗೂ ಮೌಲ್ಯ, ಎರಡು ಕಾರಣಕ್ಕೂ ಮುಖ್ಯವೆನ್ನಿಸುವ ಕಲಾಕೃತಿ. ಕಾಡಿನ ಸಂರಕ್ಷಣೆಯ ಕಥನವನ್ನೊಳಗೊಂಡ ‘ಗಂಧದಗುಡಿ’ ನಾಡಪ್ರೇಮದ ದ್ಯೋತಕವಾಗಿ, ರೂಪಕವಾಗಿ ಚಿತ್ರರಸಿಕರ ಮನಸ್ಸಿನಲ್ಲಿ ಉಳಿದುಕೊಂಡಿದೆ. ಸಿದ್ದಲಿಂಗಯ್ಯರ ‘ದೂರದ ಬೆಟ್ಟ’, ವೈ.ಆರ್. ಸ್ವಾಮಿ ನಿರ್ದೇಶನದ

## ನಾಯಕಿಯರ ವಸಂತ ಕಾಲ

ನಾಯಕ ನಟರು ಬಸವಳಿದಂತೆ ಕಾಣಿಸುತ್ತಿರುವ ಕನ್ನಡ ಚಿತ್ರರಂಗದಲ್ಲಿ ಹೊಸ ನಾಯಕಿಯರು ತಮ್ಮ ಪ್ರತಿಭೆಯಿಂದ ಕೊಂಚ ಉತ್ಸಾಹ ಮೂಡಿಸಿದ್ದಾರೆ.

ರುಕ್ಮಿಣಿ ವಸಂತ್ ಹಾಗೂ ಚೈತ್ರಾ ಆಚಾರ್ 2023ರಲ್ಲಿ ಗಮನಸೆಳೆದ ಕಲಾವಿದೆಯರು. ಸೌಂದರ್ಯದಿಂದ ಮಾತ್ರವಲ್ಲ, ಅಭಿನಯದಿಂದಲೂ ಗಮನಸೆಳೆದ ಜಾಣೆಯರು. ‘ಸಪ್ತ ಸಾಗರದಾಚೆ ಎಲ್ಲೋ’ ಸೈಡ್–ಎ ಮತ್ತು ಸೈಡ್–ಬಿ ಹಾಗೂ ‘ಬಾನ ದಾರಿಯಲ್ಲಿ’ – ಒಟ್ಟು, ರುಕ್ಮಿಣಿ ನಟನೆಯ ಮೂರು ಸಿನಿಮಾಗಳು ತೆರೆಕಂಡಿವೆ. ಕಂಗಳಲ್ಲೂ ಮಾತನಾಡಬಲ್ಲ ಕಲಾವಿದೆಯೊಬ್ಬಳು ಬಹಳ ಕಾಲದ ನಂತರ ಕನ್ನಡ ಚಿತ್ರರಂಗಕ್ಕೆ ದೊರಕುತ್ತಿರುವ ಭರವಸೆಯನ್ನು ಅವರು ಮೂಡಿಸಿದ್ದಾರೆ. ‘ಸಪ್ತ ಸಾಗರದಾಚೆ ಎಲ್ಲೋ’ ಯುಗಳ ಸಿನಿಮಾಗಳು ಪ್ರೇಕ್ಷಕರಿಗೆ ಆಪ್ತವೆನ್ನಿಸುವಲ್ಲಿ ರುಕ್ಮಿಣಿ ಕೊಡುಗೆ ದೊಡ್ಡದಿದೆ.

‘ಸಪ್ತ ಸಾಗರದಾಚೆ ಎಲ್ಲೋ’ ಸಿನಿಮಾದ ಸೈಡ್–ಬಿ ಹಾಗೂ ‘ಟೋಬಿ’ ಚಿತ್ರಗಳಲ್ಲಿ ನಟಿಸಿರುವ ಚೈತ್ರಾ ಆಚಾರ್ ಕೂಡ ನಟನೆಯ ಸಾಮರ್ಥ್ಯ ನೆಚ್ಚಿಕೊಂಡಿರುವ ಕಲಾವಿದೆ. ರುಕ್ಮಿಣಿ ಹಾಗೂ ಚೈತ್ರಾ ಅವರೊಂದಿಗೆ ‘ಸ್ವಾತಿ ಮುತ್ತಿನ ಮಳೆ ಹನಿಯೆ’ ಸಿನಿಮಾದ ಸಿರಿ ರವಿಕುಮಾರ್ ಅವರನ್ನೂ ನೆನಪಿಸಿಕೊಳ್ಳಬೇಕು. ಭಾವಪ್ರಧಾನ ಪಾತ್ರಗಳಿಗೆ ಜೀವ ತುಂಬುವ ವಿಶ್ವಾಸ ಮೂಡಿಸಿರುವ ಈ ನಟಿಯರು, ಗಟ್ಟಿ ಪಾತ್ರಗಳು ಸಿಕ್ಕಲ್ಲಿ ಕನ್ನಡ ಚಿತ್ರರಂಗದಲ್ಲಿ ಇನ್ನಷ್ಟು ಕಾಲ ಉಳಿಯಬಲ್ಲರು.

‘ಟಗರು ಪಲ್ಯ’ ಸಿನಿಮಾದ ಅಮೃತಾ, ನಟ ಪ್ರೇಮ್ ಅವರ ಮಗಳು. ಚೊಚ್ಚಿಲ ಚಿತ್ರದಲ್ಲಿನ ಯುವನಟಿಯ ಉತ್ಸಾಹ ಗಮನಾರ್ಹ.



ರುಕ್ಮಿಣಿ ವಸಂತ್